**ದಿನಾಂಕಃ 24-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನನಗೆ ಕರಿಯಪ್ಪ ಮತ್ತು ಸತ್ಯನಾರಾಯಣ ಎಂದು ಇಬ್ಬರು ಅಣ್ಣಂದಿರು ಇರುತ್ತಾರೆ. ವಾದಿಯ ತಂದೆ ನಿಂಗಪ್ಪ ನನಗೆ ಚಿಕ್ಕಪ್ಪ ಆಗುತ್ತಾರೆ. ನಾನು ಮತ್ತು ವಾದಿ ಅನ್ಯೋನ್ಯವಾಗಿ ಇರುತ್ತೇವೆ. ಕರಿಯಪ್ಪ ಮತ್ತು ಸತ್ಯನಾರಾಯಣ ರವರು ತೀರಿಹೋಗಿರುತ್ತಾರೆ. ಸಿದ್ದಪ್ಪರವರಿಗೆ ದಾವ ಸ್ವತ್ತು ಹೇಗೆ ಬಂದಿರುತ್ತದೆ ಎಂದು ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ಖಾನೇಶುಮಾರಿ ನಂ 18, 19, 21 ರ ಅಳತೆ ನನಗೆ ಹೇಳಲು ಬರುವುದಿಲ್ಲ. ಖಾನೇಶುಮಾರಿ ನಂ 18, 19, 21 ಅದರ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಖಾನೇಶುಮಾರಿ ನಂ 18, 19, 21 ನಿವೇಶನಗಳನ್ನು ನನ್ನ ತಂದೆಗೆ ಬಂದ ಹಿಸ್ಸೆಯನ್ನು ನೋಂದಣಿ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ. ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪನಿಗೆ ಯಾವ ಆಸ್ತಿ ಬಂದಿತ್ತು ಎಂದು ನನಗೆ ತಿಳಿದಿರುವುದಿಲ್ಲ. ವಿಭಾಗ ಪತ್ರದ ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ದಾವ ಸ್ವತ್ತಿನ ದಕ್ಷಿಣದ ಕಡೆ ವಾದಿಯ ಸ್ವತ್ತು ಇರುತ್ತದೆ. ಗ್ರಾಮಠಾಣಾದ ಪಕ್ಕದಲ್ಲಿ ವಾದಿಯಾದ ಶಿವಣ್ಣನವರ ಜಮೀನು ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಗ್ರಾಮಠಾಣಾದ ಉತ್ತರ ಭಾಗಕ್ಕೆ ಅತ್ತಿಗನಾಳು ಗ್ರಾಮದ ರಸ್ತೆ ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೂ ಅತ್ತಿಗನಾಳು ಗ್ರಾಮದ ರಸ್ತೆ ಇರುತ್ತದೆ ಎಂದರೆ ಸರಿ.

ನಾನು ತರೀಕೆರೆ ವಾಸಿಯಾಗಿದ್ದು, ವಾದಿಯು ಅವರ ಜಮೀನಿನಲ್ಲಿ ಏನು ಬೆಳೆದಿದ್ದಾರೆ ಎಂದು ನನಗೆ ತಿಳಿದಿರುವುದಿಲ್ಲ. ವಾದಿಯು ದಾವ ಸ್ವತ್ತಿನಲ್ಲಿ ಸ್ವಾಧೀನ ಇರುವ ಬಗ್ಗೆ ನೀವು ಯಾವುದಾದರೂ ದಾಖಲಾತಿಯನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದು, ಆದರೆ ಅವರು ಸ್ವಾಧೀನದಲ್ಲಿ ಇರುತ್ತಾರೆಂದು ನುಡಿದಿರುತ್ತಾರೆ. ಸರ್ವೆಯರ್ ರವರು ದಾವ ಸ್ವತ್ತನ್ನು ಅಳತೆ ಮಾಡಲು ಬಂದ ವಿಚಾರ ನನಗೆ ತಿಳಿದಿರುವುದಿಲ್ಲ. ನಿಮ್ಮ ತಂದೆ ವಾದಿಯ ತಂದೆಗೆ ದಾವ ಸ್ವತ್ತನ್ನು ಮಾರಾಟ ಮಾಡಲು ಯಾವುದೇ ಹಕ್ಕು ಇರುವುದಿಲ್ಲ, ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮಗೆ ದಾವ ಸ್ವತ್ತಿನ ಬಗ್ಗೆ ಯಾವುದೇ ವಿಚಾರ

ತಿಳಿದಿರುವುದಿಲ್ಲ, ವಾದಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ವಾದಿಯು ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವುದಿಲ್ಲ ಹಾಗೂ ಅವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಖಾನೇಶುಮಾರಿ ನಂ 18, 19, 21 ಗ್ರಾಮಠಾಣಕ್ಕೆ ಸೇರಿರುವ ಸ್ವತ್ತಾಗಿರುತ್ತದೆ ಎಂದರೆ ಸರಿ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**